ಮನೆಯಲ್ಲಿ ಕಣ್ಣೀರಿನಲ್ಲೇ ಕೈ ತೊಳೆಯುವ ತಾಯಿ. ಶಾಲೆಯಲ್ಲಿ ಕಣ್ಣೀರಿಡುವಂತೆ ಗೋಳು ಹುಯ್ದುಕೊಳ್ಳುವ ಸಹಪಾಠಿಗಳು, ತನ್ನ ಹುಟ್ಟಿನ ಬಗ್ಗೆ ತುಚ್ಛವಾಗಿ ಹೀಯಾಳಿಸಿ ಕೀಳಾಗಿ ಕಾಣುವ ಶಿಕ್ಷಕರು. ಲಲಿತಳ ಮಗನಿಗೆ ಏಳನೇ ತರಗತಿಗೆ ಬರುವಷ್ಟರಲ್ಲಿ ಆ ಊರು ಸಾಕಾಗಿ ಹೋಯಿತು. ಒಂದು ದಿನ ಯಾರಿಗೂ ಹೇಳದೆ ಬಸ್ಸೊಂದನ್ನು ಹತ್ತಿ ಗೊತ್ತು ಗುರಿಯಿಲ್ಲದೆ ಪ್ರಯಾಣ ಬೆಳೆಸಿದ. ಒಂದೊಂದು ದಿನ ಒಂದೊಂದು ಊರು ಸುತ್ತುತ್ತಾ ಪುಣೆಗೆ ಬಂದ." ದೀರ್ಘವಾಗಿ ಉಸಿರೆಳೆದುಕೊಂಡ ಧರಣೇಂದ್ರಯ್ಯ ಒಂದು ಕ್ಷಣ ನನ್ನನ್ನೇ ದೃಷ್ಟಿಸಿ,

"ಹಾಗೆ ಪುಣೆಗೆ ಓಡಿ ಹೋದ ಆ ಬಾಲಕನೇ ಧರಣೇಂದ್ರ... ಅಂದ್ರೆ ನಾನು" ಎಂದರು.

ಕುತೂಹಲಕಾರಿ ಸಿನಿಮಾಕಥೆಯೇನೋ ಎಂಬಂತೆ ತನ್ಮಯತೆಯಿಂದ ಕೇಳುತ್ತಾ ಕುಳಿತಿದ್ದ ನನಗೆ ಅಚ್ಚರಿಯಾಗಿತ್ತು. ಅಂದರೆ, ಧರಣೇಂದ್ರಯ್ಯ ಹೇಳುತ್ತಿರುವುದು ತಮ್ಮದೇ ಕಥೆಯನ್ನ! ಬಾಲ್ಯದಲ್ಲೇ ಮನೆ ಬಿಟ್ಟು ಹೋದ ಹುಡುಗ ಇಳಿವಯಸ್ಸಿನಲ್ಲಿ ನನ್ನ ಮುಂದೆ ಕುಳಿತಿದ್ದಾರೆ! ಅಷ್ಟಕ್ಕೂ ನನಗೂ ಇವರಿಗೂ ಯಾವುದೇ ಸಂಪರ್ಕವಿರದಿದ್ದರೂ ನನ್ನನ್ನೇ ಹುಡುಕಿಕೊಂಡು ಬಂದ ಉದ್ದೇಶವಾದರೂ ಏನಿರಬಹುದು?

ಅವರ ಮುಂದುವರೆದ ಮಾತುಗಳು ನನ್ನ ಯೋಚನೆಯನ್ನು ನಿಲ್ಲಿಸಿದವು.

"ಪುಣೆಯ ಸೈಕಲ್ ಶಾಪೊಂದರಲ್ಲಿ ಕೆಲಸಕ್ಕೆ ಸೇರಿಕೊಂಡೆ. ಶಾಪಿನಲ್ಲೇ ಮಲಗಲು ಜಾಗ ಕೊಟ್ಟಿದ್ದ ಮಾಲೀಕ. ಒಂದು ವರ್ಷದಲ್ಲಿ ಅಲ್ಪ ಸ್ವಲ್ಪ ರಿಪೇರಿ ಕೆಲಸ ಕಲಿತೆ. ಕೈಯಲ್ಲೊಂದಿಷ್ಟು ದುಡ್ಡು ಕೂಡಿಸಿಕೊಂಡು ಅಲ್ಲಿಂದ ಮುಂಬೈಗೆ ಹಾರಿದೆ. ಬೀದಿ ಬದಿಯ ಹೋಟೆಲೊಂದರಲ್ಲಿ ತಟ್ಟೆ ಲೋಟ ತೊಳೆದೆ. ಸ್ವಲ್ಪ ಅನುಭವವಾಯಿತು. ಕ್ಯಾಂಟೀನೊಂದರಲ್ಲಿ ಎರಡು ವರ್ಷ ದುಡಿದೆ. ಅಲ್ಲಿಂದ ದೊಡ್ಡ ಹೋಟೆಲೊಂದಕ್ಕೆ ಬಡ್ತಿ ಪಡೆದೆ. ಹೀಗೆ ನನಗೆ ಹದಿನಾರು ವರ್ಷಗಳಾಗುವಷ್ಟರಲ್ಲಿ ಹೋಟೆಲ್ ವ್ಯವಹಾರದಲ್ಲಿ ಪರಿಣತನಾದೆ. ಮುಂಬೈನಂತಹ ಮಹಾನಗರದಲ್ಲಿ ಮೋಜಿನಿಂದ ಬದುಕುವುದನ್ನೂ ಕಲಿತೆ. ಅದುವರೆಗೂ ಕಾಡದ ಅಮ್ಮನ ನೆನಪು ಕಾಡತೊಡಗಿತು. ಆ ಸಮಯಕ್ಕಾಗಲೇ ನನ್ನ ಬಳಿ ಸಾಕಷ್ಟು ಹಣ ಇತ್ತು. ಬ್ಯಾಂಕಿನಲ್ಲಷ್ಟು ದುಡ್ಡು ಇಟ್ಟು ಊರಿಗೆ ಬಂದೆ. ಅಮ್ಮ ನನ್ನೊಂದಿಗೆ ಬರಲೊಪ್ಪಲಿಲ್ಲ. ಆ ಊರಲ್ಲೇ ಒಂದು ಹೋಟೆಲ್ ಆರಂಭಿಸಿದೆ. ಹೋಟೆಲ್ ನಡೆಸುವ ಕಲೆ ಗೊತ್ತಿದ್ದರಿಂದ ಒಳ್ಳೆಯ ವ್ಯಾಪಾರವಾಗ್ತಾ ಇತ್ತು. ಹಣ ಬೆಳೀತಾಹೋಯ್ತು. ನನ್ನಪ್ಪನ ಕುಟುಂಬ ನನ್ನ ಬೆಳವಣಿಗೆಯನ್ನು ಸಹಿಸಲಿಲ್ಲ.

ನನ್ನ ಬಳಿ ಹಣ ಹರಿದಾಡುತ್ತಿತ್ತು ಅಂದೆನಲ್ಲಾ... ಅದರ ಪ್ರಭಾವದಿಂದಾಗಿ ನನ್ನ ಹಿಂದೆ ಮುಂದೆ ಘಟಿಂಗರ ಗುಂಪು ಇರುತ್ತಿತ್ತು. ಹಣ ಇರುವುದೇ ಮಜಾ ಮಾಡಲಿಕ್ಕೆ ಎಂಬ ತಿಳಿದುಕೊಂಡಿದ್ದ ಜನ ಅವರೆಲ್ಲ. ಅವರಿಗಾಗಿ ಸಾಕಷ್ಟು ಖರ್ಚುಮಾಡುತ್ತಿದ್ದೆ. ಹೀಗೆ ಅಂಕುಶವಿಲ್ಲದ ಬಾಳು, ನಿಯಂತ್ರಣವಿಲ್ಲದ ಬದುಕು, ವಯೋಸಹಜಗುಣ ಒಂದೊಂದಾಗಿ ಕೆಟ್ಟಚಟಗಳು ಅಂಟಿಕೊಂಡವು.

ಮೊದಲೇ ನನ್ನನ್ನೂ, ನನ್ನಮ್ಮನನ್ನೂ ಕಂಡರಾಗದಿದ್ದ ನಮ್ಮಪ್ಪನ ಕುಟುಂಬಕ್ಕೆ ನನ್ನ ನಡೆವಳಿಕೆ ಒಂದು ಅಸ್ತ್ರವಾಯಿತು. ಊರಿನ ಜನರನ್ನೆಲ್ಲಾ ಸೇರಿಸಿ, ಪಂಚಾಯ್ತಿ ನಡೆಸಿ ಊರಿನಿಂದ ನಮಗೆ ಬಹಿಷ್ಕಾರ ಹಾಕಿದರು. ನನ್ನ ಹೋಟೆಲನ್ನು ಕಿತ್ತು ನೆಲಸಮ ಮಾಡಿದರು. ನನಗದೆಲ್ಲಿತ್ತೋ ಸಿಟ್ಟು ಪಂಚಾಯ್ತಿಯಲ್ಲೇ ನನ್ನ ಸಹೋದರರೆನಿಸಿಕೊಂಡವರ ಮೇಲೆ ಏರಿ ಹೋದೆ. ಪಂಚಾಯ್ತಿ ರಣರಂಗವಾಯ್ತು. ಊರಿನ ಜನ ನನ್ನ ಹಿಡಿದು, ಹೊಡೆದು ಮನೆಯೊಂದರಲ್ಲಿ ಕೈ ಕಾಲು ಕಟ್ಟಿ ಎಸೆದು ಬೀಗ ಜಡಿದು ಹೋದರು. ಇಡೀ ರಾತ್ರಿ ಅನ್ನ, ನೀರು, ನಿದ್ದೆ ಇಲ್ಲದೆ ಕಳೆದೆ. ಬೆಳಗ್ಗೆ